ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಎಫ್. ಡಿ.ಪಿ. ನಂ. **2/2010**

ದಿಃ **15-07-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ವಿಜಯಕುಮಾರ್ | ಸಿ.ಡಬ್ಲ್ಯೂ | **01** |
| ವಯಸ್ಸು | 46 ವರ್ಷ | | |
| ತಂದೆಯ ಹೆಸರು | ಲೇಟ್ ಕೆ.ಕೆ. ಸಂಜೀವಮೂರ್ತಿ | | |
| ವೃತ್ತಿ | ಸರ್ವೆಯರ್ | | |
| ವಾಸಸ್ಥಳ | ದೊಡ್ಡಪೇಟೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ | | |

ಮುಖ್ಯ ವಿಚಾರಣೆಃಃ

ಸಾಕ್ಷಿಯು ದಿನಾಂಕ 27-01-2014 ರಂದು ಮಹಜರ್ ಅನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ಮಹಜರ್ ಅನ್ನು ನಿಪಿ-1 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ತಯಾರಿಸಿರುವ ಸ್ಕೆಚ್ ಗಳಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸ್ಕೆಚ್ ಗಳ 1 ಸೆಟ್ ನಲ್ಲಿ 3 ಪ್ರತಿಗಳಿದ್ದು ಪ್ರತಿಯೊಂದು ಸೆಟ್ ನ ಸ್ಕೆಚ್ ಅನ್ನು ನಿಪಿ-2 ರಿಂದ ನಿಪಿ-7 ಎಂದು ಗುರುತಿಸಲಾಯಿತು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-2 ಎ ರಿಂದ ನಿಪಿ-7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನೊಂದು ಮಹಜರ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ನಿಪಿ-8 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿರುವ ನೋಟಿಸ್ ಅನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ನೋಟಿಸ್ ಅನ್ನು ನಿಪಿ-9 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು **3** ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಡಿ.ಎನ್ ರವರಿಂದಃ

ನಾನು ಅಳತೆ ಕಾರ್ಯ ಪ್ರಾರಂಭಿಸುವ ಮುಂಚಿತವಾಗಿ ಈ ಪ್ರಕರಣದ ವಾದಿಗಳಿಗೆ ಹಾಗೂ ಪ್ರತಿವಾದಿಗಳಿಗೆ ನೋಟೀಸ್ ಅನ್ನು ನೀಡಿರುತ್ತೇನೆ. ನಾನು ಅಳತೆ ಕಾರ್ಯ ಪ್ರಾರಂಭಿಸುವ ದಿನದ ಎಷ್ಟು ದಿನಗಳ ಹಿಂದೆ ವಾದಿಗಳಿಗೆ ಹಾಗೂ ಪ್ರತಿವಾದಿಗಳಿಗೆ ನೋಟಿಸ್ ಅನ್ನು ನೀಡಿದೆನು ಎಂಬುದು ನನಗೆ ನೆನಪಿಲ್ಲ. ನಾನು ಅವರಿಗೆ ಒಂದು ಭಾರಿ

ನೋಟಿಸ್ ಅನ್ನು ನೀಡಿದೆನು. ಇಲಾಖೆಯ ಪಾರ್ ಮ್ಯಾಟಿನ ನೋಟಿಸಿನಲ್ಲಿ ವಾದಿ ಹಾಗೂ ಪ್ರತಿವಾದಿಗಳ ಹೆಸರು ಹಾಗೂ ಸರ್ವೆ ನಂಬರ್ ಗಳನ್ನು ನಮೂದಿಸಿ ನೋಟಿಸ್ ಅನ್ನು ನೀಡಿರುತ್ತೇನೆ. ಎಫ್.ಡಿ.ಪಿ 2/2010 ರಲ್ಲಿ ನ್ಯಾಯಾಲಯದ ಆದೇಶದಂತೆ ಅಳತೆ ಕಾರ್ಯ ಮಾಡಬೇಕಾಗಿತ್ತು ಸಹಕರಿಸಬೇಕೆಂದು ನಾನು ನೀಡಿದ ನೋಟಿಸಿನಲ್ಲಿ ಸ್ಪಷ್ಟವಾಗಿ ನಮೂದಿಸಿರುವುದಿಲ್ಲ. ನಿಪಿ-9 ರ ನೋಟಿಸಿನ ಮೇಲ್ಭಾಗದ ಬಲಗಡೆ ಎಫ್.ಡಿ.ಪಿ 7/13-14 ಎಂದು ನಮೂದಾಗಿದೆ ಎಂದರೆ ಸರಿ. ಈ ಪ್ರಕರಣದ ವಾದಿಗಳು ಹಾಗೂ ಪ್ರತಿವಾದಿಗಳ ಮಧ್ಯೆ ಗೊಂದಲವನ್ನು ಸೃಷ್ಠಿ ಮಾಡಲು ನಿಪಿ-9 ರ ನೋಟಿಸಿನಲ್ಲಿ ತಪ್ಪು ಎಫ್.ಡಿ.ಪಿ ಸಂಖ್ಯೆಯನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ರ ನೋಟಿಸಿನಲ್ಲಿ ಎಫ್.ಡಿ.ಪಿ 2/2010 ರಲ್ಲಿ ನ್ಯಾಯಾಲಯದ ನಿರ್ದೇಶನದಂತೆ ನಮ್ಮ ಕಛೇರಿಯ ಸಂಖ್ಯೆ ಎಫ್.ಡಿ.ಪಿ 7/13-14 ಎಂದು ಸ್ಪಷ್ಠಿಕರಿಸಲು ತೊಂದರೆ ಇರಲಿಲ್ಲ. ನಾನು ಕಾನೂನಿನಡಿಯಲ್ಲಿ ನಿರ್ದಿಷ್ಟವಾಗಿ ನೀಡಬೇಕಾದ ನೋಟಿಸ್ ಅನ್ನು ನೀಡದ ಕಾರಣ ಸರ್ವೆ ಕಾರ್ಯ ನಡೆಯುವಾಗ ಪ್ರತಿವಾದಿಗಳು ಸ್ಥಳದಲ್ಲೇ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ-8 ರ ಹೇಳಿಕೆಗೆ ಯಾರು ಸಹಿ ಮಾಡಿದರು ಎಂಬುದು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಸ್ಥಳದಲ್ಲಿ ಹಾಜರಿದ್ದ ಗ್ರಾಮಸ್ಥರು ಸಹಿ ಮಾಡಿದರು ಎಂದು ಹೇಳಿಕೆಯಲ್ಲಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಸ್ಥಳದಲ್ಲಿದ್ದ ಜನರು ಅದೇ ಗ್ರಾಮದವರು ಎಂದು ನಾನು ಅವರ ಗುರುತಿನ ದಾಖಲೆಗಳನ್ನು ಪಡೆದುಕೊಂಡು ನಿಗದಿಪಡಿಸಿರುವುದಿಲ್ಲ. ಅಳತೆ ಕಾರ್ಯವನ್ನು ನಾನು ನ್ಯಾಯಾಲಯದ ನಿರ್ದೇಶನದಂತೆ ಕೈಗೊಂಡಿರುತ್ತೇನೆ. ನಾನು ಅಳತೆ ಮಾಡಿದ ಜಮೀನುಗಳ ಚೆಕ್ಕುಬಂದಿಗಳನ್ನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದ ಆದೇಶದಂತೆ ಅಳತೆ ಮಾಡಿ ಭಾಗಗಳನ್ನು ಗುರುತಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅಳತೆ ಮಾಡಿ ಭಾಗಗಳನ್ನು ಗುರುತಿಸುವಾಗ ಎ ಖರಾಬ್ ಹಾಗೂ ಬಿ ಖರಾಬ್ ಜಾಗಗಳನ್ನು ಸಹ ಸೇರಿಸಿರುತ್ತೇನೆ. ನನ್ನ ವರದಿಯಲ್ಲಿ ನಮೂದಿಸಿರುವ ಬ್ಲಾಕ್ ಗಳಲ್ಲಿ ಯಾವ ದಿಕ್ಕಿಗೆ ಎಷ್ಟು ವಿಸ್ತೀರ್ಣ ಖರಾಬ್ ಜಮೀನು ಇದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ಎ ಖರಾಬ್ ಹಾಗೂ ಬಿ ಖರಾಬ್ ಜಮೀನನ್ನು ಗುರುತಿಸದೆ ಇದ್ದಲ್ಲಿ ಹಾಗೂ ಅದು ಯಾರ ಭಾಗಕ್ಕೆ ಹೋಗಬಹುದು ಎಂದು ನಮೂದಿಸದಿದ್ದಲ್ಲಿ ನನ್ನ ಅಳತೆ ಕಾರ್ಯವು ಪೂರ್ಣಗೊಳ್ಳುವುದಿಲ್ಲ ಎಂದರೆ ಸರಿಯಲ್ಲ. ನಾನು ಅಳತೆ ಮಾಡಿ ಗುರುತಿಸಿರುವ ಬ್ಲಾಕ್ ನಂ.1 ಕ್ಕೆ ಯಾವ ದಿಕ್ಕಿನಲ್ಲಿ ದಾರಿ ಇದೆ ಎಂಬುದನ್ನು

ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯದ ಆದೇಶದಂತೆ ಅಳತೆ ಮಾಡಿ ಭಾಗವನ್ನು ಗುರುತಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಈ ನ್ಯಾಯಾಲಯದಲ್ಲಿ ನಡೆಯುವ ನಿರ್ದೇಶನವನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು ಅಳತೆ ಕಾರ್ಯ ಮಾಡಿದ ಜಮೀನುಗಳಲ್ಲಿ 1/3 ಭಾಗವನ್ನು ಸಮವಾಗಿ ಗುರುತಿಸಿರುತ್ತೇನೆ. ನಿಪಿ-2 ರಲ್ಲಿ 1 ನೇ ಬ್ಲಾಕಿನ ವಿಸ್ತೀರ್ಣ 8 ¾ ಗುಂಟೆ ಎಂದು ನಮೂದಿಸಿರುತ್ತೇನೆ. ಸರ್ವೆ ನಂ.23/3 ರ 26 ಗುಂಟೆಯನ್ನು 8 ¾ ಗುಂಟೆಯಂತೆ ಭಾಗ ಮಾಡಿದರೆ ಎಲ್ಲರಿಗೂ ಸಮಪಾಲು ಬರುತ್ತದೆಯೇ? ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಜಮೀನಿನಲ್ಲಿ ಒಂದು ಭಾಗವನ್ನು 8 ½ ಎಂದು ಪರಿಗಣಿಸಿದರೆ ಪಾಲುದಾರರಿಗೆ ಕಡಿಮೆ ಜಾಗ ಬರಬಹುದು ಎಂದು ಆಲೋಚಿಸಿ ಪ್ರತಿಯೊಂದು ಭಾಗವನ್ನು 8 ¾ ಗುಂಟೆ ಎಂದು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಳತೆ ಕಾರ್ಯ ಮಾಡುವಾಗ ಸಮವಾಗಿ ಪಾಲು ಮಾಡಲು ಜಾಗದ ಕೊರತೆ ಇದೆ ಎಂದು ನಾನು ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ. ನಾನು ಅಳತೆ ಕಾರ್ಯ ಮಾಡಿರುವ ಪ್ರತಿಯೊಂದು ಸರ್ವೆ ನಂಬರ್ ನಲ್ಲಿ 1/2-1/4 ಗುಂಟೆ ಹೆಚ್ಚು ಬಂದಿರುತ್ತದೆ ಎಂದರೆ ಸರಿ. ಅಳತೆಯನ್ನು ಮಾಡಿ ಜಮೀನಿನ ವಿಸ್ತೀರ್ಣವನ್ನು ಹೆಚ್ಚಿಸಿ ಎಂದು ನ್ಯಾಯಾಲಯದ ನಿರ್ದೇಶನ ಇರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯದ ನಿರ್ದೇಶನವನ್ನು ಮೀರಿ ಅಳತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-5 ರಲ್ಲಿ 15 ಗುಂಟೆ ಸಂಪೂರ್ಣವಾಗಿ ಬ್ಲಾಕ್ ನಂ. 1 ಎಂದು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ವಾದ ಪತ್ರದ ಪ್ರಕಾರ ಸರ್ವೆ ನಂ.59/2 ರಲ್ಲಿ 1 ಎಕರೆ 15 ಗುಂಟೆ ಇರುತ್ತದೆ ಆದರೆ ನಮ್ಮ ಆಕಾರ ಬಂದ್ ನ ಪ್ರಕಾರ ಸದರಿ ಸರ್ವೆ ನಂಬರಿನಲ್ಲಿ 15 ಗುಂಟೆ ಮಾತ್ರ ಇರುತ್ತದೆ ಹಾಗೂ ನಿಪಿ-5 ರಲ್ಲಿ 15 ಗುಂಟೆ ಪೈಕಿ 5 ಗುಂಟೆಯನ್ನು ಬ್ಲಾಕ್ ನಂ.1 ಎಂದು ಅಳತೆ ಮಾಡಿ ಗುರುತಿಸಿರುತ್ತೇನೆ ಆದರೆ ಕಣ್ ತಪ್ಪಿನಿಂದ 15 ಗುಂಟೆ ಎಂದು ನಿಪಿ-5 ರ ಕಾಲಂ ನಂ.5 ರಲ್ಲಿ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದ ವಾದ ಪತ್ರದಲ್ಲಿ ಸರ್ವೆ ನಂ. 59/2 ರ ವಿಸ್ತೀರ್ಣ 1 ಎಕರೆ 15 ಗುಂಟೆ ಎಂದು ನಮೂದಿಸಿದ್ದು ಆಕಾರ್ ಬಂದ್ ನಲ್ಲಿ ಸದರಿ ಸರ್ವೆ ನಂಬರ್ ನಲ್ಲಿ 15 ಗುಂಟೆ ಇರುವುದಾಗಿ ನಮೂದಿಸಿದ್ದು ಸದರಿ ಸರ್ವೆ ನಂಬರ್ 59/2 ರ ಜಮೀನನ್ನು ಅಳತೆ ಮಾಡಿ ಭಾಗವನ್ನು ಗುರುತಿಸಲು ಸಾಧ್ಯವಿಲ್ಲವೆಂದು ನಾನು ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ. ದಾವಾ ಐಟೆಮ್ ನಂ.4 ರ ಸರ್ವೆ ನಂ. 59/2 ರ ಜಮೀನಿಗೆ ಸಂಬಂಧಪಟ್ಟ ಇತರೆ ದಾಖಲೆಗಳನ್ನು ವಾದಿಯ ಕಡೆಯಿಂದ ಪಡೆದುಕೊಂಡಿರುವುದಿಲ್ಲ.

ನನ್ನ ಇಚ್ಛೆಯಂತೆ ಅಳತೆ ಕಾರ್ಯವನ್ನು ಮಾಡಿ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.59/2 ರ ಜಮೀನಿನ ವಿಸ್ತೀರ್ಣವು ಏರುಪೇರು ಆಗಿರುವ ವಿಚಾರವನ್ನು ನನ್ನ ಮೇಲಾಧಿಕಾರಿಗಳ ಗಮನಕ್ಕೆ ನಾನು ತಂದಿರುವುದಿಲ್ಲ. ಸರ್ವೆ ನಂ.59/2 ರ ಜಮೀನಿನ ವಿಸ್ತೀರ್ಣದ ಬಗ್ಗೆ ಅನುಮಾನ ಬಂದಾಗ ನಮ್ಮ ಇಲಾಖೆಯಲ್ಲಿರುವ ದಾಖಲೆಗಳನ್ನು ನೋಡಿ ಪರಿಶೀಲಿಸಿರುತ್ತೇನೆ. ಸದರಿ ಜಮೀನಿನ ವಿಸ್ತೀರ್ಣ ಅನುಮಾನಾಸ್ಪದವೆಂದು ನನ್ನ ವರದಿಯಲ್ಲಿ ಶರಾವನ್ನು ಬರೆದು ದಾಖಲೆಗಳೊಂದಿಗೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು